ಕರಾವಳಿ ತೀರದಲ್ಲಿ ಮಿನಿನ ಕ್ಷಾಮ.

2925:(3912)

ಶ್ರೀ ಎನ್.ಯೋಗಿಶ್ ಭಟ್ (ಮಂಗಳೂರು): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದ ಕರಾವಳಿ ತೀರದಲ್ಲಿ ಮೀನುಗಾರರು ಮೀನಿನ ಕ್ಷಾಮದಿಂದ ತುಂಬಾ ನಷ್ಟ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) 38 ವಿದೇಶಿ ಕಂಪನಿಗಳ ಸುಮಾರು 200 ಯಾಂತ್ರಿಕ ಬೋಟುಗಳು ಕರ್ನಾಟಕದ ಸಮುದ್ರ ತೀರದಲ್ಲಿ ಮೀನುಗಾರಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದಲ್ಲಿ ಇದನ್ನು ನಿಲ್ಲಿಸಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ನೆರೆಯ ಕೇರಳ ಹಾಗೂ ಗೋವಾ ರಾಜ್ಯಗಳ ಮೀನುಗಾರರೂ ಕರ್ನಾಟಕದ ಸಮುದ್ರ ಪ್ರದೇಶದಲ್ಲಿ ಮೀನುಗಾರಿಕೆ ಮಾಡುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಇದರ ವಿರುದ್ಧ ರಾಜ್ಯ ಸರ್ಕಾರ ಕೈಕೊಂಡಿರುವ ಕ್ರಮಗಳೇನು?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) ಹವಾಮಾನ ವೈಪರಿತ್ಯದಿಂದಾಗಿ ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳುಗಳಲ್ಲಿ ಸುಮಾರು 20 ದಿನಗಳ ಕಾಲ ಮೀನುಗಾರಿಕೆ ಸ್ಥಗಿತಗೊಂಡಿರುವುದರಿಂದ ಮೀನಿನ ಹಿಡುವಳಿ ಈ ಅವಧಿಯಲ್ಲಿ ಕಡಿಮೆಯಾಗಿದೆ.

ಆ) 38 ವಿದೇಶಿ ಕಂಪೆನಿಗಳ ಸುಮಾರು 200 ಯಾಂತ್ರೀಕೃತ ದೋಣಿಗಳು ಕರ್ನಾಟಕ ಸಮುದ್ರ ತೀರದಲ್ಲಿ ಮೀನುಗಾರಿಕೆ ಮಾಡುತ್ತಿಲ್ಲವೆಂದು ಕೇಂದ್ರ ಸರ್ಕಾರದಿಂದ ತಿಳಿದು ಬಂದಿದೆ. ಆಳ ಸಮುದ್ರ ಮೀನುಗಾರಿಕೆ ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟದ್ದಾಗಿದ್ದು, ಅವರ ಪ್ರಕಾರ ಇಡೀ ದೇಶದಲ್ಲಿ ಒಟ್ಟು 38 ಆಳ ಸಮುದ್ರ ಮೀನುಗಾರಿಕೆ ದೋಣಿಗಳಿಗೆ ಮಾತ್ರ ಅನನ್ಯ ಆರ್ಥಿಕ ವಲಯದಲ್ಲಿ (ಇ.ಇ.ಜಡ್) ಮಾತ್ರ ಮೀನುಗಾರಿಕೆ ಮಾಡಲು ಅನುಮತಿ ನೀಡಲಾಗಿದೆಯೆಂದು ತಿಳಿದು ಬಂದಿದೆ. ಆದುದರಿಂದ ರಾಜ್ಯದ ನಿಗಧಿತ ಪ್ರದೇಶದಲ್ಲಿ (ಸಮುದ್ರ ತೀರದಿಂದ 24 ನಾಟಿಕಲ್ ಮೈಲ್ ಪ್ರದೇಶದೊಳಗೆ) ಆಳ ಸಮುದ್ರ ಮೀನುಗಾರಿಕೆ ಮಾಡುವುದನ್ನು ನಿಷೇಧಿಸಲಾಗಿದೆ. ಈ ಷರತ್ತುಗಳ ಉಲ್ಲಂಘನೆಯಾದಲ್ಲಿ ಕೇಂದ್ರ ಸರ್ಕಾರದ ಕರಾವಳಿ ರಕ್ಷಣಾ ಪಡೆಯವರು ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳುವರು. ಸದರಿ ಪಡೆಯವರು ಪ್ರಕಾರ ರಾಜ್ಯದ ಸೀಮಿತ ಸಮುದ್ರ ಪ್ರದೇಶದಲ್ಲಿ ಅಂದರೆ 24 ನಾಟಿಕಲ್ ಮೈಲ್ ಒಳಗೆ ಆಳ ಸಮುದ್ರ ಮೀನುಗಾರಿಕೆ ನಡೆದಿರುವುದಿಲ್ಲ.

ಇ) ಈ ಬಗ್ಗೆ ಯಾವುದೇ ವರದಿ ಅಥವಾ ದೂರುಗಳು ಇರುವುದಿಲ್ಲ.